**ದಿನಾಂಕ: 27-03-2026 ರಂದು ಸಾಕ್ಷಿಯನ್ನು ಕರೆಯಿಸಿ ಪ್ರಮಾಣೀಕರಿಸಲಾಯಿತು.**

**ಪಾಟೀ ಸವಾಲುಃ 2ನೇ ಎದುರುದಾರರ ಪರ ಶ್ರೀ ಎಸ್.ಪಿ. ವಕೀಲರಿಂದಃ**

1. ಈಗ ನನ್ನ ವಯಸ್ಸು 50 ವರ್ಷ ಇರುತ್ತದೆ. ನನ್ನ ವಯಸ್ಸು 50 ವರ್ಷ ಇದೆ ಎಂದು ತೋರಿಸಲು ಆಧಾರ್ ಕಾರ್ಡ್ ಸಲ್ಲಿಸಿರುತ್ತೇನೆ. ನಾನು ಒಕ್ಕಲುತನ ಮಾಡುತ್ತೇನೆ. ವಾರ್ಷಿಕವಾಗಿ 10 ರಿಂದ 12 ಲಕ್ಷ ಆದಾಯ ಇದೆ. ವಾರ್ಷಿಕ 10 ರಿಂದ 12 ಲಕ್ಷ ಆದಾಯ ಇದೆ ಎಂದು ತೋರಿಸಲು ಏನು ದಾಖಲೆ ಹಾಜರುಪಡಿಸಿದ್ದೀರಿ ಎಂದರೆ ಬಹಳ ದಿನ ಆಗಿದೆ ನೆನಪಿಲ್ಲ ಎಂದು ಉತ್ತರಿಸುತ್ತಾರೆ. ಅಪಘಾತ ಆಗಿ 8-9 ವರ್ಷ ಆಗಿರಬಹುದು. ಅಪಘಾತವಾದ ದಿನ ಜೇವರ್ಗಿ ಬಸ್

ಸ್ಟ್ಯಾಂಡಿನಿಂದ ಜಿ.ಪಿ.ಎಸ್. ಶಾಲೆಯ ಕಡೆಗೆ ಹೊರಟಿದ್ದೆನು. ಅಪಘಾತವಾದ ದಿನ ಗಾಡಿಯನ್ನು ಯಾರು ನಡೆಸುತ್ತಿದ್ದರು ಮತ್ತು ಎಷ್ಟು ಜನರು ಹೊಟಿದ್ದೀರಿ ಎಂದರೆ ನಾನೊಬ್ಬನೇ ಎಂದು ಉತ್ತರಿಸುತ್ತಾರೆ.

2. ದೂರನ್ನು ಯಾವಾಗ ನೀಡಿದ್ದೇನೆ ಎಂದು ನೆನಪಿಲ್ಲ ಆದರೆ ಪೊಲೀಸರು ಆಸ್ಪತ್ರೆಗೆ ಬಂದಿದ್ದರು. ಅಪಘಾತವಾದ ದಿನವೇ ಆಸ್ಪತ್ರೆಯಲ್ಲಿ ಅಡ್ಮಿಟ್ ಆಗಿರುತ್ತೇನೆ. ದೂರನ್ನು ದಿನಾಂಕ 22-12-2017 ರಂದು ನೀಡಿರುತ್ತೀರಿ ಅಪಘಾತವು 21-12-2017 ರಂದು ಆಗಿರುತ್ತದೆ ಎಂದರೆ ಬಹಳ ದಿನ ಆಗಿದ್ದರಿಂದ ನೆನಪಿಲ್ಲ ಎಂದು ಉತ್ತರಿಸುತ್ತಾರೆ. ನೀವು ಆಸ್ಪತ್ರೆಯಲ್ಲಿ ದಿನಾಂಕ 22-12-2017ರಂದು ಅಡ್ಮಿಟ್ ಆಗಿದ್ದೀರಿ ಎಂದರೆ ರಾತ್ರಿ ಅಡ್ಮಿಟ್ ಮಾಡಿದ್ದಾರೆ ಎಂದು ಉತ್ತರಿಸುತ್ತಾರೆ. ನಿಮಗೆ ಆ ದಿನ ಅಪಘಾತವೇ ಆಗಿಲ್ಲ ಕಲ್ಬುರ್ಗಿಯಲ್ಲಿ ಬೇರೆ ಕಡೆ ಎಲ್ಲೊ ಅಪಘಾತವಾಗಿದ್ದರೂ ಸಹ ಪರಿಹಾರ ಹಣ ಪಡೆಯುವ ಉದ್ದೇಶದಿಂದ 2ನೇ ಎದುರುದಾರರ ಮೇಲೆ ಸುಳ್ಳು ಕೇಸು ಮಾಡಿದ್ದೀರಿ ಎಂದರೆ ಸರಿಯಲ್ಲ. ನನಗೆ ಚಾಲನಾ ಪರವಾನಿಗೆ ಇರುತ್ತದೆ ಅದನ್ನು ನ್ಯಾಯಾಲಯಕ್ಕೆ ಹಾಜರುಪಡಿಸಿದ್ದೇನೆ. 1ನೇ ಎದುರುದಾರರ ವಾಹನ ಚಾಲನಾ ಪರವಾನಿಗೆ ಪತ್ರ ಹಾಜರುಪಡಿಸಿದ್ದೀರಾ ಎಂದರೆ ನನಗೆ ಗೊತ್ತಿಲ್ಲ ನನ್ನ ತಮ್ಮನೇ ಕೊಟ್ಟಿದ್ದಾನೆ ಎಂದು ಉತ್ತರಿಸುತ್ತಾರೆ. ನಿಮಗೆ ವಾಹನ ನಡೆಸಲು ಬರುವುದಿಲ್ಲ ನಡುರಸ್ತೆಯಲ್ಲಿ ಒಮ್ಮೆಲೇ ಬ್ರೇಕ್ ಹಾಕಿದ್ದರಿಂದ ಹಿಂದಿನಿಂದ ಜೀಪ್ ಬಂದು ಗುದ್ದಿರುತ್ತದೆ ಎಂದರೆ ಸರಿಯಲ್ಲ.

3. ನಿಮಗೆ ಎಲ್ಲೆಲ್ಲಿ ಗಾಯಗಳಾಗಿದ್ದವು ಎಂದರೆ ಭುಜದ ಎಲುಬು ಸರಿದಿತ್ತು. ಆಸ್ಪತ್ರೆಯಲ್ಲಿ ಎಷ್ಟು ದಿನ ಇದ್ದೀರಿ ಎಂದರೆ ಆಸ್ಪತ್ರೆಯಲ್ಲಿ 3-4 ದಿನ ಇದ್ದಿರಬಹುದು ಎಂದು ಉತ್ತರಿಸುತ್ತಾರೆ. ಭುಜದ ಎಲುಬು ಮುರಿದಿದೆ ಎಂದು ತೋರಿಸಲು ಅಂಗನ್ಯೂನ್ಯತಾ ಪ್ರಮಾಣ ಪತ್ರ ಹಾಜರುಪಡಿಸಿದ್ದೀರಾ ಎಂದರೆ ನೆನಪಿಲ್ಲ. ನೀವು

ಹಾಜುರಪಡಿಸಿದಂತಹ ಅಂಗನ್ಯೂನ್ಯತಾ ಪ್ರಮಾಣ ಪತ್ರ ಖಾಸಗಿ ಆಸ್ಪತ್ರೆಯದ್ದಾಗಿದ್ದು ಅದನ್ನು ಹಣವನ್ನು ಕೊಟ್ಟು ತಪ್ಪಾಗಿ ತಂದು ಹಾಜರುಪಡಿಸಿದ್ದೀರಿ ಎಂದರೆ ಸರಿಯಲ್ಲ. ನಿಮಗೆ ಗಾಯಗಳು ಆಗಿದ್ದಕ್ಕಿಂತ ಹೆಚ್ಚು ಹಣವನ್ನು ತೋರಿಸಿ ವೈದ್ಯಕೀಯ ಬಿಲ್ಲುಗಳನ್ನು ಹಾಜರುಪಡಿಸಿದ್ದೀರಿ ಎಂದರೆ ಸರಿಯಲ್ಲ. ನಿಮಗೆ ಆದಂತಹ ಗಾಯಗಳಿಂದ ನಿಮ್ಮ ದಿನನಿತ್ಯದ ಜೀವನಕ್ಕೆ ಯಾವುದೇ ರೀತಿಯಾದ ತೊಂದರೆ ಆಗಿಲ್ಲ ಎಂದರೆ ಆಗಿದೆ ಎಂದು ಉತ್ತರಿಸುತ್ತಾರೆ. ಆ ದಿನ ಅಪಘಾತವೇ ಆಗಿಲ್ಲದಿದ್ದರೂ ಸಹ ನೀವು ಮತ್ತು 1ನೇ ಎದುರುದಾರರು ಶಾಮೀಲಾಗಿ 2ನೇ ಎದುರುದಾರರಿಂದ ಪರಿಹಾರ ಪಡೆಯುವ ಸಲುವಾಗಿ ಸುಳ್ಳು ಕೇಸು ಮಾಡಿದ್ದೀರಿ ಎಂದರೆ ಸರಿಯಲ್ಲ.

**(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿಯ ಹೇಳಿಕೆಯನ್ನು ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಲಾಯಿತು)**

ಓ ಹೇ.ಕೇ. ಸರಿ ಅದೆ

ಹಿರಿಯ ಸಿವಿಲ್ ಮತ್ತು ಜೆ ಎಮ್ ಎಫ್ ಸಿ ನ್ಯಾಯಾಧೀಶರು,
ಜೇವರ್ಗಿ